**ಮಾನ್ಯ ವಿಶೇಷ ಜಿಲ್ಲಾಧಿಕಾರಿಗಳು, ಭೂಸ್ವಾಧೀನ ಪುನರವಸತಿ ಮತ್ತು ಪುನರನಿರ್ಮಾಣ, ಬೃಹತ ನೀರಾವರಿ ಯೋಜನೆಗಳು, ಬೆಳಗಾವಿ.**
**ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರವಸತಿ ಮತ್ತು ಪುನರನಿರ್ಮಾಣ ಕಾಯ್ದೆ 2013 ರ (ದಿ:01-01-2014 ರಿಂದ ಜಾರಿಗೆ ತಂದ ಅಧಿಸೂಚನೆ ಪ್ರಕಾರ) ರೊಂದಿಗೆ ಓದಲಾದ ಕಲಂ 11(1) ರಲ್ಲಿ ಮಾಡಿದ ಅಧಿಸೂಚನೆ.**

**ಸಂ.** ಭೂಸ್ವಾ/ಎಂ.ಐ-ಡಿಕೆ-13/03-04/21/17-18 **ದಿನಾಂಕ:** 28/12/2017

ಈ ಕೆಳಗಿನ ಅನುಸೂಚಿಯಲ್ಲಿ ಕಾಣಿಸಿದ ಜಮೀನುಗಳು ಒಂದು ಸಾರ್ವಜನಿಕ ಉದ್ದೇಶಕ್ಕಾಗಿ ಬೆಳಗಾವಿ ಜಿಲ್ಲೆ ಗೋಕಾಕ ತಾಲ್ಲೂಕಿನ ಕೈತನಾಳ ಗ್ರಾಮದಲ್ಲಿ ಬರುವ ಮಾರ್ಕಂಡೇಯ ಬಲದಂಡೆ ಕಾಲುವೆಯ ಅಡ್ಡಿಯಲ್ಲಿ ಬರುವ ವಿತರಣಾ ಕಾಲುವೆಯ 16 ರ ನಿರ್ಮಾಣಕ್ಕಾಗಿ ಬೇಕಾಗುವುದೆಂದು ವಿಶೇಷ ಜಿಲ್ಲಾಧಿಕಾರಿಗಳು, ಭೂಸ್ವಾಧೀನ, ಪುನರ ವಸತಿ ಮತ್ತು ಪುನರ ನಿರ್ಮಾಣ ಬೃಹತ ನೀರಾವರಿ ಯೋಜನೆಗಳು, ಬೆಳಗಾವಿ ಇವರಿಗೆ ಕಂಡು ಬಂದಿದೆ.

ಈ ಮೂಲಕ ತಿಳಿಸುವದೇನೆಂದರೆ, ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ 2013 ರ (ದಿನಾಂಕ: 01-01-2014 ರಿಂದ ಜಾರಿಗೆ ತಂದ ಅಧಿಸೂಚನೆ ಪ್ರಕಾರ) ಸದರಿ ಕಾಯ್ದೆಯ ಕಲಂ 11 ರ ಸೌಲಭ್ಯದ ಮೇರೆಗೆ (2013 ಕೇಂದ್ರದ 30 ನೇ ಕಾಯ್ದೆ) ಸದರ ಕಾನೂನಿನ ಕಲಂ 12 ರ ಮೇರೆಗೆ ಪ್ರದತ್ತವಾದ ಅಧಿಕಾರ ಚಲಾಯಿಸುವಂತೆ ವಿಶೇಷ ಜಿಲ್ಲಾಧಿಕಾರಿಗಳು, ಭೂಸ್ವಾಧೀನ, ಪುನರವಸತಿ ಮತ್ತು ಪುನರನಿರ್ಮಾಣ, ಬೃಹತ ನೀರಾವರಿ ಯೋಜನೆಗಳು, ಬೆಳಗಾವಿ ಇವರಿಗೆ ನೀಡಲಾಗಿದೆ. [ಸೂಕ್ತ ಪರಿಹಾರದ ಹಕ್ಕು ಮತ್ತು ಭೂಸ್ವಾಧೀನ, ಪುನರವಸತಿ ಮತ್ತು ಪುನರನಿರ್ಮಾಣದಲ್ಲಿ ಪಾರದರ್ಶಕತೆ (ಕರ್ನಾಟಕ) ನಿಯಮಾವಳಿಗಳು (ದಿನಾಂಕ: 21-01-2014 ರಂದು ಜಾರಿಗೆ ಬಂದ ಅಧಿಸೂಚನೆ ಪ್ರಕಾರ] ಅಧ್ಯಾಯ 1 ರ ಅನುಕ್ರಮ ನಂ.2(ಬಿ) ನೋಡಿ] ಹಾಗೂ ಕಲಂ. 43 ರ ಮೇರೆಗೆ ಪುನರ್‌ವಸತಿ, ಪುನರ್‌ನಿರ್ಮಾಣದ ಅಧಿಕೃತ ಕಾರ್ಯಪಾಲನೆ ಪ್ರಾಧಿಕಾರವನ್ನು ವಿಶೇಸ ಭೂಸ್ವಾಧೀನಾಧಿಕಾರಿಗಳು ಹಿಡಕಲ್ ಇವರಿಗೆ ನೀಡಲಾಗಿದೆ.

ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು ಪುನರ್‌ವಸತಿ ಮತ್ತು ಪುನರ್‌ನಿರ್ಮಾಣ ಕಾಯ್ದೆ-2013 ರ ಕಲಂ 6(2) ರ ಅಡಿಯಲ್ಲಿ ನೀರಾವರಿ ಯೋಜನೆಗಳಿಗಾಗಿ ಭೂಸ್ವಾಧೀನಪಡಿಸುವಾಗ ಪರಿಸರದ ಮೇಲಿನ ಪರಿಣಾಮ ನಿರ್ಧರಣದ ಅಂಶ (Environmental Impact Assessment) ಪ್ರಕ್ರಿಯೆಯನ್ನು ಬೇರಾವುದೇ ಕಾಯ್ದೆಗಳಡಿಯಲ್ಲಿ ಮಾಡಬೇಕಾದಲ್ಲಿ ಸಾಮಾಜಿಕ ನಿರ್ಧರಣದ ಅಂಶ (Social Impact Assessment) ಅನ್ವಯಿಸುವುದಿಲ್ಲವೆಂದು ಸ್ಪಷ್ಟೀಕರಿಸಿದೆ. ಅದರಂತೆ ಮಾನ್ಯ ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯದ ಸಚಿವಾಲಯ ಹೊಸ ದೆಹಲಿ ಇವರ ಆದೇಶ ಸಂ:ಪಿ.ನಂ.8-62/2000-ಎಫ್‌ಸಿ ದಿನಾಂಕ:00-06-2005 ರ ಪ್ರಕಾರ ಮಾರ್ಕಂಡೇಯ ಯೋಜನೆಗೆ ಪರಿಸರದ ಮೇಲಿನ ಪರಿಣಾಮದ ನಿರ್ಧರಣಾ ಅಂಶವನ್ನು ಈಗಾಗಲೇ ಪಡೆಯಲಾಗಿರುತ್ತದೆ.

2013 ರ ಕಾಯ್ದೆ ಕಲಂ 15(1) ರ ಮೇರೆಗೆ ಆಸಕ್ತಿವುಳ್ಳವರು ತಮ್ಮ ತಂಟೆ-ತಕರಾರುಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 60 ದಿನದೊಳಗೆ ವಿಶೇಷ ಭೂಸ್ವಾಧೀನಾಧಿಕಾರಿಗಳು, ಹಿಡಕಲ್ ಡ್ಯಾಮ್ ಇವರ ಈ ಕಾರ್ಯಾಲಯಕ್ಕೆ ಅರ್ಜಿ ಸಲ್ಲಿಸಬೇಕು. ನಂತರ ಬಂದ ಅರ್ಜಿಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇಯಕ್ಕೆ ಹಾಕಲಾಗುವುದು.

ಈ ಜಮೀನು ಸ್ವಾಧೀನ ಕೆಲಸ ನಿರ್ವಹಿಸುವಲ್ಲಿ ಸರಕಾರದಿಂದ ನೇಮಿಸಲ್ಪಟ್ಟ ಮೋಜಣಿದಾರರಿಗಾಗಲಿ ಅಥವಾ ಈ ಕೆಲಸ ಮಾಡುವವರಿಗೆ ಯಾರೂ ಅಡ್ಡಿ ಮಾಡಕೊಡದೆಂದು ಎಚ್ಚರಿಸಲಾಗಿದೆ. ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಮತ್ತು ಸೂಕ್ತ ಪರಿಹಾರದ ಹಕ್ಕು, ಪುನರವಸತಿ ಮತ್ತು ಪುನರನಿರ್ಮಾಣ ಕಾಯ್ದೆ 2013 ರ ಕಾಯ್ದೆ ಕಲಂ 11(4) ರ ಮೇರೆಗೆ ಈ ಅಧಿಸೂಚನೆ ಪ್ರಕಟಗೊಂಡ ದಿನಾಂಕದಿಂದ ಸದರಿ ಸ್ವಾಧೀನಪಡಿಸಿಕೊಳ್ಳಲಿರುವ ಭೂಮಿಯನ್ನು ಒಪ್ಪಂದದ ಮೇರೆಗೆ ವಿಕ್ರಯಿಸುವ, ಭೋಗ್ಯಕ್ಕೆ ಅಡವಿಡುವ, ಅನುಭವಿಸುವ, ಬದಲಾಯಿಸುವ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲು ನಿರ್ಭಂದಿಸಿದೆ. ಅಂತಹ ಯಾವುದೇ ಕ್ರಯ ಅಥವಾ ಇನ್ನಾವುದೇ ರೀತಿಯ ಅಭಿವೃದ್ಧಿ ಕಾರ್ಯಗಳನ್ನು ಐತೀರ್ಪು ರಚಿಸುವಾಗ ಗಣನೆಗೆ ತೆಗೆದುಕೊಳ್ಳದೇ ಅಂತಿಮವಾಗಿ ಸದರಿ ಕಾಯ್ದೆ ಅನ್ವಯ ಭೂಸ್ವಾಧೀನ ಪಡಿಸಿಕೊಳ್ಳಲಾಗುವುದೆಂದು ಈ ಮೂಲಕ ತಿಳಿಯಪಡಿಸಲಾಗಿದೆ.

ಸದರಿ ಪ್ರಕರಣದಲ್ಲಿ ಭೂಸ್ವಾಧೀನಕ್ಕೆ ಒಳಪಡುವ ಜಮೀನಿನ ನಕ್ಷೆಯನ್ನು ವಿಶೇಷ ಭೂಸ್ವಾಧೀನಾಧಿಕಾರಿಗಳು, ಹಿಡಕಲ್ ಡ್ಯಾಮ್ ಇವರ ಕಾರ್ಯಾಲಯದಲ್ಲಿ ಪರಿಶೀಲನೆಗಾಗಿ ಇಡಲಾಗಿದೆ.